ಮೌನವೇ ಮಾತಾಗಿತ್ತು. ರಾಯರಾಗಲೀ ಸರೋಜಮ್ಮನಾಗಲೀ ಗಂಡ ಹೆಂಡತಿಯೇ ಅಲ್ಲದವರ ಹಾಗೇ ಇದ್ದರು. ಆದರೆ ಮೂರನೇ ದಿನ ಕಾಲೇಜು ಬಿಡುವ ಹೊತ್ತಿಗೆ ರಾಯರು ಇರುವ ಇಂಗ್ಲಿಷ್ ವಿಭಾಗಕ್ಕೆ ಸಪತ್ನೀಕನಾಗಿ ಬಂದ ಸತೀಶ ಕುಲಕರ್ಣಿ, 'ನಾವು ಈ ದಿನ ನಿಮ್ಮ ಮನೆಗೆ ಬರುವವರಿದ್ದೇವೆ ಸರ್!' ಎಂದಾಗ ರಾಯರು ತಬ್ಬಿಬ್ಬಾಗಿದ್ದರು. ಅವರು ತಕ್ಷಣ ಸಾವರಿಸಿಕೊಂಡು 'ನನ್ನ ಹೆಂಡತಿ ನಿಮ್ಮ ಮದುವೆಯಾದಂದಿನಿಂದ ಹೇಳುತ್ತಿದ್ದಾಳೆ. ನಿಮಗೊಂದು ಊಟ ಕೊಡಿಸ ಬೇಕು ಎಂದು! ನಾನು ಅದು ಮನೆಯಲ್ಲೇ ಆಗಬಹುದಲ್ಲ?' ಎಂದದ್ದಕ್ಕೆ ಆಕೆ, 'ನಮ್ಮ ಅಡುಗೆ ಅಷ್ಟು ಚೆನ್ನಾಗಿ ಇರೋದಿಲ್ಲಾರಿ. ಹೋಟೆಲಲ್ಲಿ ಆದರೆ ಅವರು ಇಷ್ಟಪಟ್ಟದ್ದನ್ನು ಅವರು ಸೆಲೆಕ್ಟ್ ಮಾಡುತ್ತಾರೆ. ನಾವು ಇಷ್ಟಪಟ್ಟದನ್ನು ನಾವು ಸೆಲೆಕ್ಟ್ ಮಾಡೋಣ' ಎಂದಿದ್ದಳು. ಹಾಗಾಗಿ ನಾನೇ ಯಾವ ದಿನ ಫಿಕ್ಸ್ ಮಾಡೋಣ ಎಂದು ನಿಮ್ಮನ್ನು ಕೇಳುವವನಿದ್ದೆ. ಈಗ ನೀವು ಹೇಳಿ. ವೆನ್ ವಿಲ್ ಯು ಫ್ರೀ?'

ಸತೀಶರು ಹೆಂಡತಿಯ ಮುಖ ನೋಡಿದರು. ಆಕೆ 'ನಮಗೆ ಸಾರು ಅನ್ನವಾದರೂ ಸರಿ. ನಿಮ್ಮ ಪತ್ನಿಯ ಕೈ ಅಡುಗೆಯೇ ಆಗಬೇಕೆಂಬ ಹಟ ಇದೆ ಸರ್. ನಾನು ನಿಮ್ಮ ಸೌತ್ ಕೆನರಾದವರ ಅಡುಗೆ ರುಚಿ ನೋಡಬೇಕು. ಒಂದು ಸಂಡೇ ಇಟ್ಟುಕೊಂಡರೆ ನಾವು ಬೆಳಗ್ಗೆಯೇ ಬಂದು ನಿಮ್ಮ ಮೇಡಂ ಅವರಿಗೆ ಹೆಲ್ಪೂ ಮಾಡಬಹುದು' ಎಂದಳು ಮುಗುಳುನಗುತ್ತ.

ರಾಯರಿಗೆ ಸಂಕಟಕ್ಕೆ ಇಟ್ಟುಕೊಂಡಿತು. ಇದನ್ನು ಸರೋಜಳಲ್ಲಿ ಪ್ರಸ್ತಾಪಿಸಿದರೆ ಆಕೆ ಉರಿದೆದ್ದಾಳು. ಬಟ್ ಬರಬೇಡಿ ಅನ್ನುವುದು ಸರಿಯಲ್ಲ. ನೋಡೋಣ ಎಂದು ಮನೆಗೆ ಫೋನು ಮಾಡುತ್ತಾ, ಸರೋಜ ಫೋನು ರಿಸೀವ್ ಮಾಡುತ್ತಾಳೋ ಇಲ್ಲವೋ ಎಂದು ಅಳುಕಿನಲ್ಲಿದ್ದಾಗ ಆ ಕಡೆಯಿಂದ 'ಹಲೋ' ಎಂಬ ಶಬ್ದ ರಾಯರಿಗೆ ಕೇಳಿಸಿತ್ತು. ರಾಯರು ತುಂಬ ತಗ್ಗಿದ ಸ್ವರದಲ್ಲಿ, 'ಸರೋಜ, ನಮ್ಮ ಸತೀಶ ಕುಲಕರ್ಣಿ ದಂಪತಿ ನಮ್ಮಲ್ಲಿಗೆ ಇದೀಗ ಬರ್‍ತಿದ್ದಾರೆ. ಏನಾದರೂ ತರಬೇಕಾ?' ಎಂದು ಕೇಳಿದ್ದರು. ಆಗ ಸರೋಜಮ್ಮನೂ ತಗ್ಗಿದ ಸ್ವರದಲ್ಲಿ 'ಹೌದಾ, ಬರಲಿ, ಆದರೆ ನೀವು ಪೇಟೆಯಿಂದ ಏನು ತಂದರೂ ಅದು ಪೇಟೆಯ ವಸ್ತುವೇ ಆಗುತ್ತದೆ. ಮನೆಯಲ್ಲಿ ಮಾಡಿದ್ದಕ್ಕೆ ಗೌರವ ಜಾಸ್ತಿ! ನನಗೆ ಕ್ಷೀರ ಅಂದರೆ ಇಷ್ಟ ಎಂದು ನಿಮಗೆ ಗೊತ್ತು. ಅದರಲ್ಲಿ ನಾನು ಎಕ್ಸ್‌ಪರ್ಟ್ ಕೂಡಾ. ಅದನ್ನೇ ಮಾಡುತ್ತೇನೆ. ಇನ್ನು ಖಾರಕ್ಕೆ ನಿನ್ನೆ ಕೋಡುಬಳೆ ಮಾಡಿಟ್ಟದ್ದು ಇದೆ. ನಮ್ಮ ಕೋಪದ ಗಲಾಟೆಯಲ್ಲಿ ಅದನ್ನು ನಿಮಗೆ ಕೊಡಲೇ ಇಲ್ಲ. ಸ್ಸಾರಿ' ಎಂದಿದ್ದರು.

ರಾಯರು ಖುಶಿಯಲ್ಲಿ ಇಬ್ಬರನ್ನೂ ಕರೆದು ಕೊಂಡು ಮನೆಗೆ ಬಂದರು. ಸರೋಜಮ್ಮ ಬಾಗಿಲಲ್ಲೇ ಸ್ವಾಗತಿಸಿ, 'ನೀವು ಬಂದದ್ದು ತುಂಬಾ ಸಂತೋಷ. ನಾವೇ ಕರೆಯಬೇಕೆಂದಿದ್ದೆವು. ಯಾವಾಗ ಕರೆಯಬೇಕು ಎಂದು ಇನ್ನೂ ಇತ್ಯರ್ಥ ಆಗಿರಲಿಲ್ಲ! ಎಂದರು.

'ಥ್ಯಾಂಕ್ ಯು ಮೇಡಂ' ಎಂದು ಹೇಳಿದ ಸತೀಶ, 'ನಮ್ಮನ್ನು ಹೊಟೇಲಿಗೇ ಕರೆಸಿ ಡಿನ್ನರ್ ಪಾರ್ಟಿ ಮಾಡಬೇಕೂಂತ ಯೋಚಿಸುತ್ತಿದ್ದೀರಂತೆ ನೀವು! ಬೇಡ ಎಂದಿದ್ದೆ ನಾನು ಮಾವನಿಗೆ' ಎಂದಿದ್ದರು.

ಸರೋಜಮ್ಮನಿಗೆ ರಾಯರು ಇಂಥ ಯೋಚನೆ ಯಾಕೆ ಹಾಕಿರಬೇಕು ಎನ್ನುವುದು ಅರ್ಥವಾಗಿ 'ಹೌದು ಹೌದು!' ಎಂದಿದ್ದರು ಕೃತಕವಾಗಿ. ಅಷ್ಟರಲ್ಲಿ ಜಯಂತಿ 'ನಮಗೆ ಅದ್ಯಾವುದೂ ಬೇಡ ಮೇಡಂ. ನಿಮ್ಮ ಕೈ ಊಟವೇ ಬೇಕು' ಎಂದಳು.

ಸರೋಜಮ್ಮನಿಗೆ ಹೇಗೆ ಉತ್ತರಿಸಬೇಕು ಎಂದು ಹೊಳೆಯಲಿಲ್ಲ. ಆಗ ರಾಯರು ಮಧ್ಯೆ ಪ್ರವೇಶಿಸಿ, 'ಜಯಂತಿ ಇದರಲ್ಲಿ ಕಾಂಪ್ರಮೈಸ್ ಇಲ್ಲ. ನಾವು ನಿಮಗೆ ಹೊಟೇಲಿನಲ್ಲೇ ಊಟ ಕೊಡಿಸೋದು ಖಂಡಿತ' ಎಂದರು. ಅಲ್ಲಿಗೆ ಆ ಅಧ್ಯಾಯ ಮುಗಿದಿತ್ತು. ಸರೋಜಮ್ಮ ತಾನು ತಯಾರಿಸುತ್ತಿದ್ದ ಕ್ಷೀರ ಎಲ್ಲಿ ಹದ ತಪ್ಪುತ್ತದೋ ಎಂದು ಗಾಬರಿಯಲ್ಲಿ ಒಳನಡೆದರು. ಅವರ ಬೆನ್ನಿಗೇ ಜಯಂತಿಯೂ ಹಿಂಬಾಲಿಸಿದಳು.

ಎಲ್ಲರೂ ಕುಳಿತು ಟಿಫಿನ್ ಮುಗಿಸಿದರು. ಜಯಂತಿ 'ತುಂಬಾ ಚೆನ್ನಾಗಿತ್ತು ಮೇಡಂ ನೀವು ಮಾಡಿದ ಸಿಹಿ ಮತ್ತು ಖಾರ' ಎನ್ನುತ್ತ 'ಥ್ಯಾಂಕ್ಸ್' ಹೇಳಿದಳು. 'ಇದಕ್ಕೆ ಥ್ಯಾಂಕ್ಸ್ ಯಾಕೆ ಬೇಕು?' ಎಂದು ಸರೋಜಮ್ಮ ಆಮೇಲೆ ಟಿಫಿನ್‌ಗೆ ಬಳಸಿದ ತಟ್ಟೆ ಪ್ಲೇಟು ಕಪ್ ಸಾಸರುಗಳನ್ನು ತೊಳೆಯಲು ಒಳನಡೆದರು.

ರಾಯರು 'ಇದೇ ಸರಿಯಾದ ಸಮಯ' ಎಂದು ಪರಿಭಾವಿಸಿ ಅಡುಗೆ ಮನೆಯಾಚೆ ಕಾಲಿಟ್ಟು, 'ನಾವು ಇವರಿಗೆ ಡಿನ್ನರ್ ಪಾರ್ಟಿ ಯಾವಾಗ ಇರಿಸೋದು ಸರೋಜ? ನೀನೇ ಒಂದು ಡೇಟು ಹೇಳು' ಎಂದರು ಹೆಂಡತಿಗೆ.

ಸರೋಜ 'ನನಗೆ ಯಾವ ದಿನವಾದರೆ ಏನು? ಅವರನ್ನೇ ವಿಚಾರಿಸಿ ನೀವು ಡೇಟ್ ಫಿಕ್ಸ್ ಮಾಡಿ. ನಾನು ಬರ್‍ತೇನೆ' ಎಂದರು.

ಸತೀಶ್ ಮತ್ತು ರಾಯರು ತಾರೀಕುಗಳನ್ನು ಲೆಕ್ಕ ಹಾಕಿ ಇಂಥ ಆದಿತ್ಯವಾರ ಎಂದು ನಿರ್ಧಾರಕ್ಕೆ ಬಂದರು. ಜಯಂತಿ 'ಇದರಲ್ಲಿ ಬದಲಾವಣೆ ಇಲ್ಲ. ಅಕ್ಕ ನೀವು ಬರಲೇಬೇಕು!' ಎಂದು ಸರೋಜಮ್ಮನ ಕೈ ಹಿಡಿದಳು.

ಆ ರಾತ್ರೆ ನಿದ್ರೆಗೆ ಜಾರುತ್ತಿದ್ದ ರಾಯರ ತಲೆ ನೇವರಿಸಿದ ಸರೋಜ ನಿಧಾನವಾಗಿ ತನ್ನ ತೋಳು ಗಳಲ್ಲಿ ರಾಯರನ್ನು ಬಂಧಿಸಿದರು. ರಾಯರು ಖುಶಿಯಲ್ಲಿ ಸರೋಜನನ್ನು ಕೂಡಿ ಪಿಸುಮಾತಿನಲ್ಲಿ, 'ಥ್ಯಾಂಕ್ ಯು ಸರೋಜ' ಎಂದರು. ಸರೋಜಳ ಕಣ್ಣಲ್ಲಿ ಬೆಳಕು ಮಿಂಚಿತ್ತು. ಆ ಬೆಳಕು ಆ ಕತ್ತಲೆಯಲ್ಲೂ ರಾಯರಿಗೆ ಕಂಡಿತ್ತು. ನಿಶ್ಚಯಿಸಿದ ದಿನದಂದು ಗೆಳೆಯರ ಡಿನ್ನರ್ ಪಾರ್ಟಿ ನಡೆಯಿತು. ರಾಯರ ಜೊತೆ ಶೆಟ್ಟಿ ಹೊಟೇಲಿಗೆ ಹೋಗಿ ನಾರ್ತ್ ಇಂಡಿಯನ್ ತಿಂಡಿಯನ್ನು ಎಲ್ಲರೂ ಮೆದ್ದು ಹೊರಬಂದರು. ಹೊಟೇಲಿನ ಯಜಮಾನ ಸದಾಶಿವ ಶೆಟ್ಟರು ಕೌಂಟರಿನಿಂದ ಎದ್ದು ಬಂದು ರಾಯರ ಕೈಕುಲುಕಿ, ದಂಪತಿಯ ಪರಿಚಯ ಮಾಡಿಕೊಂಡರು. 'ವೆರಿ ನೈಸ್ ಟು ಮೀಟ್ ಯು' ಎಂದು ಸತೀಶರ ಕೈ ಕುಲುಕಿದರು. ಆಮೇಲೆ ಸರೋಜಮ್ಮನಾಚೆ ತಿರುಗಿ ತುಳು ಭಾಷೆಯಲ್ಲಿ, 'ನೀವು ಬಾರದೆ ತುಂಬಾ ದಿನಗಳಾದವು ಸರೋಜಕ್ಕ. ಹೊಟೇಲಿಗೆ ಅಲ್ಲವಾದರೂ ಮನೆಗೆ ಬರಬಹುದಲ್ಲ ನೀವು? ರಾಜೇಶ್ವರಿ ನಿಮ್ಮನ್ನು ವಿಚಾರಿಸುತ್ತಲೇ ಇರುತ್ತಾಳೆ' ಎಂದರು. ಸರೋಜಮ್ಮ, 'ಬರಬಹುದು ಶೆಟ್ಟರೇ. ಆದರೆ ನಾನು ಬಂದ ಕೂಡಲೇ ನೀವು ನನಗೆ ಬೇಕಾಗಿ ಕೋಳಿರೊಟ್ಟಿಯ ಔತಣ ಮಾಡುತ್ತೀರಿ. ಅದು ನನಗೆ ಇಷ್ಟವಿಲ್ಲ!' ಎಂದರು.

'ಅರೇ ನಾವು ಒಂದೇ ಊರಿನವರು ಮಾತ್ರ ವಲ್ಲ, ಒಂದೇ ಜಾತಿಯವರು ಕೂಡಾ! ಕೋಳಿ ತಿನ್ನುವುದರಲ್ಲಿ ತಪ್ಪೇನು? ಅದಕ್ಕೆ ಸಂಕೋಚ ಯಾಕೆ? ಇಷ್ಟಕ್ಕೂ ನೀವು ನನ್ನ ಅಕ್ಕನೋ ತಂಗಿಯೋ ಆಗಿದ್ದರೆ, ನಿಮ್ಮನ್ನು ಉಪಚರಿಸುವುದು ನನ್ನ ಕರ್ತವ್ಯ ಎಂದುಕೊಳ್ಳುತ್ತಿರಲಿಲ್ಲವೇ ನಾನು? ಈಗಲೂ ನೀವು ಹಾಗೇ ತಿಳಿದುಕೊಳ್ಳಿ'.

ಸದಾಶಿವ ಶೆಟ್ಟರ ಈ ಮಾತಿಗೆ ಸರೋಜಮ್ಮ ನಸುನಕ್ಕರು. ರಾಯರು ಸತೀಶನ ಹೆಗಲಿಗೆ ಕೈ ಹಾಕುತ್ತಾ 'ಇದು ನಮ್ಮೂರ ಭಾಷೆ, ತುಳು ಅಂತಾರೆ ಇದಕ್ಕೆ. ತುಂಬ ಸುಂದರವಾದ ಭಾಷೆ. ಈಗ ನೋಡಿ ಅವರು ಎಷ್ಟು ಚೆನ್ನಾಗಿ ಮಾತನಾಡಿದರು. ನೋಡಿದಿರಲ್ಲ?' ಎಂದರು.

ಸತೀಶ 'ಖುಶಿಯಾಯ್ತು. ಬಟ್ ಅವರು ಮಾತನಾಡಿದ್ದು ನನಗೆ ಅರ್ಥ ಆಗಲಿಲ್ಲ' ಎಂದರು. ರಾಯರು ಅವರು ಆಡಿದ್ದನ್ನೆಲ್ಲ ವಿವರಿಸಿ 'ನನ್ನ ಹೆಂಡತಿಗೆ ನಾನ್‌ವೆಜ್ ಅದರಲ್ಲೂ ಕೋಳಿ ಅಂದರೆ ಇಷ್ಟ. ಬಟ್ ನನ್ನನ್ನು ಕೈ ಹಿಡಿದ ಮೇಲೆ ತಿನ್ನು ಅಂದರೂ ಆಕೆ ತಿನ್ನುವುದಿಲ್ಲ. ನನಗೆ ಈ ಪಾತಿವ್ರತ್ಯ, ಮಡಿವಂತಿಕೆ, ಕಂದಾಚಾರ ಇತ್ಯಾದಿಗಳ ಬಗ್ಗೆ ಗೌರವ ಇಲ್ಲ. ನನಗೆ ಸಸ್ಯಾಹಾರವೇ ಇಷ್ಟ. ಅದೇ ಬೇಕು. ಆದರೆ ಮಾಂಸಾಹಾರಿಗಳ ಬಗ್ಗೆ ಖಂಡಿತ ಕೀಳರಿಮೆ ಇಲ್ಲ. ಇವಳಲ್ಲಿ ಆ ದ್ವಂದ್ವ ಇದೆ' ಎಂದರು.

ಅಷ್ಟರಲ್ಲಿ ಮಧ್ಯೆ ಪ್ರವೇಶಿಸಿದ ಸರೋಜಮ್ಮ – 'ನಿಮ್ಮ ಭಾಷಣ ಸಾಕು. ನನ್ನ ಫಿಲಾಸಫಿಯಲ್ಲಿ ನೀವು ದಯವಿಟ್ಟು ಪ್ರವೇಶಿಸಬೇಡಿ' ಎನ್ನುತ್ತಾ, 'ಇನ್ನು ಹೊರಡೋಣವೇ?' ಎಂದರು.

ಯಾಕೆ ಇದೆಲ್ಲ ನೆನಪಾಗುತ್ತಿದೆ ಎಂದು ರಾಯರು ನಿಧಾನವಾಗಿ ಯೋಚಿಸುತ್ತಾ ನಿದ್ದೆ ಹೋದರು. ಮರುದಿನ ಬೆಳಗ್ಗೆ ರಾಯರು ಎದ್ದು ಮುಖ ತೊಳೆದು ಚಾವಡಿಗೆ ಕಾಲಿರಿಸುವಾಗ ರಾಯರ 'ವಾಕಿಂಗ್ ಮೇಟ್' ಸದಾಶಿವ ಶೆಟ್ಟರು ಪ್ರತ್ಯಕ್ಷರಾಗಿ 'ರಾಯರೇ ನಮಸ್ಕಾರ' ಎಂದು ಕೈ ಜೋಡಿಸಿ, 'ತುಂಬಾ ತಡವಾಗಿ ಎದ್ದ ಹಾಗೆ ಇದೆಯಲ್ಲ ನೀವು? ಏನು? ಯಾಕೆ?' ಎಂದು ಪ್ರಶ್ನಿಸಿದರು.

ಅಡುಗೆ ಮನೆಯಲ್ಲಿದ್ದ ಸರೋಜಮ್ಮ ಅದನ್ನು ಕೇಳಿಸಿಕೊಂಡು ಚಾವಡಿಗೆ ಪ್ರವೇಶಿಸಿ ದೊಡ್ಡ ಬಾಯಿಯಲ್ಲಿ 'ಸದಾಶಿವಣ್ಣ, ನಿನ್ನೆ ರಾತ್ರೆ ದೊಡ್ಡ ಗಂಡಾಂತರ ಆಗಿದೆಯಲ್ಲ' ಎಂದರು.

ಸದಾಶಿವಶೆಟ್ಟರು 'ಹ್ಹೂ, ಎಂಥದ್ದು?' ಎಂದರು ಆತಂಕದಲ್ಲಿ.

ಸರೋಜಮ್ಮ 'ನಮ್ಮ ಪ್ರಾರಬ್ಧ ಅನ್ನಬೇಕು.